A.—Sri S. R. KANTHI (Minister for Education).—

(*a*) The Primary School has no building of its own; the classes are being held in the Middle School building by shift system.

(*b*) Yes.

(*c*) Under the existing rules, construction, repairs and maintenance of all Primary School buildings in rural areas are the obligatory duty of the Taluk Board, the Government giving grant limited to Rs. 1,000 per Class room towards construction.

(*d*) The Taluka Board, Tiptur has been requested to undertake the construction of the building.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನೊಣವಿನಕೆರೆಯಲ್ಲಿ ಪ್ರಾಥಮಿಕ ಶಾಲಾ ಕಟ್ಟಡ ಎಷ್ಟು ವರ್ಷಗಳಿಂದ ಇಲ್ಲ, ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಹೇಳಲಕ್ಕೆ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಒಟ್ಟಿಗೆ ಕಾಲ ಬದಲಾವಣೆ ಮಾಡಿಕೊಂಡು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು, ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಕಂಠಿ.—ಅಲ್ಲಿ ಜಾಗ ಸಾಲುವುದಿಲ್ಲ ಎಂದು ತಿಳಿದು ಷಿಫ್ಟ್ ಸಿಸ್ಟಂ ಮೇಲೆ ಶಾಲೆಯನ್ನು ನಡೆಸುತ್ತಿದ್ದೇವೆ. ಆದುದರಿಂದ ಅಲ್ಲಿ ಕೊಠಡಿಗಳನ್ನು ಕಟ್ಟಿಸುವುದು ಅವಶ್ಯಕವಿದೆ. ಹೊಸದಾಗಿ ಕಟ್ಟಡವನ್ನು ಕಟ್ಟಿಸುವ ಕೆಲಸ ತಾಲ್ಲೂಕು ಬೋರ್ಡಿಗೆ ಸೇರಿದ್ದು. ಸುಮಾರು ಒಂದು ಸಾವಿರ ರೂಪಾಯಿಗಳನ್ನು ಒಂದು ಕೊಠಡಿಗೆ ಕೊಡಬೇಕು ಎಂದು ಮೊದಲು ನಿಗದಿ ಮಾಡಿದ್ದೆವು. ಈಗ ಒಂದು ಸಾವಿರ ರೂಪಾಯಿ ಬೆಲೆಯ ಮರವನ್ನು ಕೊಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ ಎರಡರಲ್ಲಿಯೂ ಸಾಕಷ್ಟು ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿದ್ದಾರೆ. ಆದರೆ ಕೊಠಡಿಗಳಿಲ್ಲದೆ ಇರುವುದರಿಂದ ಎರಡು ಶಾಲೆಗಳನ್ನೂ ಅದರ ಕಾಲಬದಲಾವಣೆ ಮಾಡಿಕೊಂಡು ಕೆಲಸ ಮಾಡುತ್ತಿರಬೇಕಾದರೆ ಸರ್ಕಾರ ಕೊಡುವಂಥ ಸಂಬಳ ಸಾರಿಗೆಗಳು ಅನ್ಯಾಯವಾಗುವುದಿಲ್ಲವೇ ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಷಿಫ್ಟ್ ಸಿಸ್ಟಂ ಪ್ರಕಾರ ಕೆಲಸ ಮಾಡುವುದು ನೊಣವಿನಕೆರೆಯಲ್ಲಿ ಮಾತ್ರವಲ್ಲ, ಬೇಕಾದಷ್ಟು ಕಡೆ ನಡೆಯುತ್ತಿದೆ. ಶಾಲಾ ಕಟ್ಟಡ ಇಲ್ಲದ ಮಾತ್ರಕ್ಕೆ ಉಪಾಧ್ಯಾಯರು ಕೆಲಸ ಮಾಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸಾಕಷ್ಟು ಕಟ್ಟಡಗಳನ್ನು ಕಟ್ಟಿಸಬೇಕು. ಈ ಕೆಲಸವನ್ನು ತಾಲ್ಲೂಕು ಬೋರ್ಡಿನವರು ಮಾಡಬೇಕು ಅದು ಅವರ ಕೆಲಸ. ಸರ್ಕಾರದವರು ಕೊಡುವಂಥ ಒಂದು ಸಾವಿರ ರೂಪಾಯಿ ಮರವನ್ನು ಸರ್ಕಾರದಿಂದ ಕೊಡಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾಲ್ಲೂಕು ಬೋರ್ಡಿನವರನ್ನು ಪದೇ ಪದೇ ಒತ್ತಾಯ ಮಾಡುತ್ತಿದ್ದರೂ ಈ ಕೆಲಸ ಆಗಿಲ್ಲ. ಸರ್ಕಾರದವರು ಇದರಲ್ಲಿ ಪ್ರವೇಶಿಸಿ, ತಾಲ್ಲೂಕು ಬೋರ್ಡಿನ ಮೇರೆ ಒತ್ತಾಯ ತಂದು ಈ ವರ್ಷವಾದರೂ ಕೆಲಸ ಮಾಡಿಸಿಕೊಡುತ್ತೀರಾ, ಸ್ವಾಮೀ ?

ಶ್ರೀ ಎಸ್. ಆರ್. ಕಂಠಿ.—ತಿಪಟೂರು ತಾಲ್ಲೂಕು ಬೋರ್ಡ್ ಶ್ರೀಮಂತ ಬೋರ್ಡ್ ಆಗಿದೆ. ಬಡ ಬೋರ್ಡ್ ಅಲ್ಲ. ಮಾನ್ಯ ಸದಸ್ಯರು ಮತ್ತು ನೊಣವಿನಕೆರೆಯವರು ಪ್ರಯತ್ನ ಮಾಡಿದರೆ ಕೆಲಸ ಆಗುತ್ತದೆ.

Unemployed Graduates and Under-graduates in the State.

*Q.—217. Sri K. LAKKAPPA (Hebbur).—

Will the Government be pleased to state:—

(*a*) whether they have collected any statistics regarding unemployed graduates and under-graduates in the State since 1962 up-to-date;

(*b*) if so, the number of graduates that were employed in the various departments since 1962?

A.—Sri D. DEVARAJ URS (Minister for Transport and Tourism).—

(*a*) Yes, so far as the figures availabe on the live registers of Employment Exchanges, are concerned.

(*b*) Year	No. of graduates in employment.
1962	13,965
1963	14,605
1964	is under compilation.

Sri K. LAKKAPPA.—The list has not been properly published and statistics have not been collected up-to-date. Why have the Government failed to collect the statistics regarding this ?

Sri H. R. KESHAVA MURTHY.—I want to know the precise meaning of Under-graduates.

Sri D. DEVARAJ URS.—Here the question is whether they have collected any statistics regarding unemployed graduates and under-graduates in the State since 1962 up-to-date. We have said 'Yes'.

Sri K. LAKKAPPA.—May I have the figures ?

Sri D. DEVARAJ URS.—We have merely answered to the point. If you want the figures, I shall give. In the year 1962, registered under-graduates and matriculates are 41,523 and graduates are 4,764. In the year 1963, the figures are 62,035 under-graduates and 6,913 graduates. In 1964, the under-graduates registered are 59,092 and graduates 6,086.

Sri G. V. GOWDA.—I wish to know the number of graduates that are employed in 1962, 1963 and 1964—whether they are employed as local candidates or whether they are taken directly.

Sri D. DEVARAJ URS.—Answers are already given. I cannot understand the question put by the Hon'ble Member. For the year 1962, the number of graduates under employment has been given as 13,965.

Sri G. V. GOWDA.—Have they become permanent employees or temporary ?

Sri D. DEVARAJ URS.—That is not known. On employment, there are 1,300 and odd graduates in several departments.

ಶ್ರೀ ಬಿ. ಬೈರಪ್ಪಾಜಿ.—ಕೆಲಸದಲ್ಲಿರುವ ಪದವೀಧರರ ಸಂಖ್ಯೆಯನ್ನು ಕೊಟ್ಟಿದ್ದಾರೆ. ಅಂಡರ್ ಗ್ರಾಜುಯೇಟ್ಸ್ ಎಷ್ಟು ಜನಕ್ಕೆ 1962 ರಿಂದ ಕೆಲಸ ಕೊಟ್ಟಿದ್ದಾರೆ, ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—1962 ರಲ್ಲಿ 7,774 ಜನಗಳಿಗೆ, 1963 ರಲ್ಲಿ 11,903 ಜನಗಳಿಗೆ ಮತ್ತು 1964 ನೆ ಇಸವಿಯಲ್ಲಿ 7,530 ಜನಗಳಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಕೆಲಸ ಸಿಕ್ಕಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪದವೀಧರರು ಮತ್ತು ಪದವೀಧರರಲ್ಲದವರು ಇಷ್ಟೊಂದು ಜನ ನಿರುದ್ಯೋಗಿಗಳಾಗಿದ್ದಾರೆ. ಈಗ ದೇಶದಲ್ಲಿ ತುರ್ತು ಪರಿಸ್ಥಿತಿ ಇರುವುದರಿಂದ ಅವರಿಗೆ ಸರ್ಕಾರಿ ಕೆಲಸ ಸಿಕ್ಕದೆ ಇದ್ದರೆ ಒಂದು ಭೂ ಸೈನ್ಯ ಮಾಡಿ ಅವರೆಲ್ಲ ವ್ಯವಸಾಯವನ್ನು ಮಾಡುವಂತೆ ವ್ಯವಸ್ಥೆ ಮಾಡಿದರೆ, ಆಹಾರ ಬೆಳೆಯುವುದರಲ್ಲಿ ಅವರಿಗೆ ಪ್ರೋತ್ಸಾಹ ಕೊಟ್ಟರೆ ಅವರಿಗೆ ಏನಾದರೂ ಒಂದು ಉದ್ಯೋಗ ಸಿಕ್ಕುತ್ತದೆ ಮತ್ತು ದೇಶದ ಆಹಾರ ಪರಿಸ್ಥಿತಿಯನ್ನೂ ಉತ್ತಮ ಪಡಿಸುವುದಕ್ಕೆ ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರ ಪ್ರಯತ್ನ ಪಟ್ಟಿದೆಯೇ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಸಲಹೆ ಯೋಚನೆ ಮಾಡುವುದಕ್ಕೆ ಅರ್ಹವಾಗಿ ಕಾಣುತ್ತದೆ.

Sri J. P. SARWESH.—May I request the Government to alter the policy of renewal of time by extending the time limit from three months to one year to make the live registers more lively ?

Sri D. DEVARAJ URS.—That is as per the Government of India direction, we have got the period as only three months.

9-00 A.M.

Sri K. LAKKAPPA.—Since there is a gradual increase in the unemployment problem in the State, at what particular time will this Government take steps to employ all the graduates ?

Sri D. DEVARAJ URS.—Unemployment problem is a very big question not only affecting this State but the entire country. All our developmental activities are directed towards employment potential also.

ಶ್ರೀ ಎಸ್. ಗೋಪಾಲ ಗೌಡ.—1962 ರಲ್ಲಿ ಕಲಸದಲ್ಲಿರುವ ಪದವೀಧರರ ಸಂಖ್ಯೆ 13,965 ಎಂದು ಉತ್ತರದಲ್ಲಿ ಹೇಳಿದೆ. ಅವರಲ್ಲಿ ಅಂಡರ್-ಗ್ರಾಜುಯೇಟ್ಸ್ ಏನಾದರೂ ಸೇರಿದ್ದಾರೋ ಅಥವಾ ಬರೀ ಪದವೀಧರರೇ ಇದ್ದಾರೋ ?

ಶ್ರೀ ಡಿ. ದೇವರಾಜ ಅರಸ್.—ಕೆಲಸ ಕೊಟ್ಟಿರುವುದೆರ್ನಾ ಅನ್‌ಎಂಪ್ಲಾಯ್ಡ್ ಗ್ರಾಜುಯೇಟ್ಸ್‌ಗೆ.

ಶ್ರೀ ಎಸ್. ಗೋಪಾಲ ಗೌಡ.—ಇಷ್ಟು ಜನ ಪದವೀಧರರೂ ಕೆಲಸದಲ್ಲಿರುವವರ ಸಂಖ್ಯೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಹೌದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಿರುದ್ಯೋಗಿಗಳ ಮಾನವ ಶಕ್ತಿಯನ್ನು ಉಪಯೋಗಿಸಿ ಆ ಮೂಲಕ ದೇಶಾಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಏನೇನು ಪ್ರಯತ್ನಗಳನ್ನು ಮಾಡಿದೆ ? ನಿರುದ್ಯೋಗಿಗಳ ಸಂಖ್ಯೆ ಪಟ್ಟಿಯನ್ನು ಸರ್ಕಾರ ಈ ಸಭೆಯ ಮುಂದಿಡುವುದಕ್ಕಾಗುತ್ತದೆಯೇ ?

Sri D. DEVARAJ URS.—I cannot go on giving reasons as to why there is unemployment. I can only give the information regarding the number of employed and unemployed.

ಶ್ರೀ ಕೆ. ಲಕ್ಕಪ್ಪ.—ಮೈಸೂರು ರಾಜ್ಯದಲ್ಲಿ ಗಣನೀಯವಾದ ಯಾವ ಕೈಗಾರಿಕೆಗಳೂ ಇಲ್ಲದೇ ಇರುವ ಪ್ರಯುಕ್ತ ಈ ದೇಶದಲ್ಲಿ ನಿರುದ್ಯೋಗ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

Sri D. DEVARAJ URS.—Sir, as I have said I cannot go on giving reasons as to why there is unemployment. I can give only information regarding the number of unemployed and employed.

ಶ್ರೀ ಸಿದ್ದಯ್ಯ ಕಾಶೀಮಠ.—ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ಅಭ್ಯರ್ಥಿಗಳನ್ನು ಸೆಲೆಕ್ಟ್ ಮಾಡುವಾಗ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ರಿಜಿಸ್ಟರ್ ಆಗಿರುವವರಿಗೆ ಮಾತ್ರ ಉದ್ಯೋಗಗಳನ್ನು ಕೊಡಲು ಸೆಲೆಕ್ಟ್ ಮಾಡರಾಗುತ್ತದೆಂದು ಸರ್ಕಾರದವರು ಅವರಿಗೆ ಒಂದು ಆದೇಶವನ್ನು ಕೊಟ್ಟಿದ್ದಾರೆಯೇ ?

Sri D. DEVARAJ URS.—That is a suggestion for action; it will be considered.

ಶ್ರೀ ಸಿ. ಆರ್. ರಂಗೇಗೌಡ.—ಈಗಿನ ವಿದ್ಯಾಭ್ಯಾಸದಲ್ಲಿ ವಿದ್ಯಾರ್ಥಿಗಳಾಗಿರುವವರು ಕೈ ಕಸುಬುಗಳಾವುವೂ ಇಲ್ಲದೆ ಬರೀ ಗುಮಾಸ್ತರಾಗುವಂತಹ ವಿದ್ಯಾಭ್ಯಾಸ ಪಡೆದಿರುವುದರಿಂದ ನಿರುದ್ಯೋಗಕ್ಕೆ ಇದೂ ಒಂದು ಕಾರಣವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri D. DEVARAJ URS.—That may be one of the reasons also.

ಶ್ರೀ ಜಿ. ವಿ. ಗೌಡ.—ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಎಷ್ಟು ಜನಗಳಿಗೆ ಉದ್ಯೋಗಗಳನ್ನು ಕಲ್ಪಿಸಬೇಕೆಂದು ಟಾರ್ಗೆಟ್ ಇಟ್ಟುಕೊಂಡಿದ್ದೀರಿ ? ಅದರಲ್ಲಿ ಎಷ್ಟು ಈಗಾಗಲೇ ಸಾಧನೆ ಮಾಡಿದ್ದೀರಿ ?

Sri D. DEVARAJ URS.—I cannot remember these figures now; if a separate question is put, I will answer.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಈಗ ಸೋಷಿಯಲಿಸ್ಟಿಕ್ ರಿಪಬ್ಲಿಕ್ ಇರುವ ಈ ದೇಶದಲ್ಲಿ ಇಂತಹ ಒಂದು ತುರ್ತು ಪರಿಸ್ಥಿತಿಯಲ್ಲಿ ಈ ನಿರುದ್ಯೋಗ ಸಮಸ್ಯೆಯನ್ನು ಸರ್ಕಾರದವರು ಬಗೆಹರಿಸದೇ ಹೋದರೆ ಸರ್ಕಾರವೇ ಒಂದು ದೊಡ್ಡ ಲೋಪವನ್ನು ತೋರಿಸಿದಂತಾಗುವುದಿಲ್ಲವೇ ?

ಅಂದಮೇಲೆ ಈ ಒಂದು ವಿಚಾರದಲ್ಲಿ ಸರ್ಕಾರದವರು ಸರಿಯಾದ ಕಾರ್ಯಮಾಡಿ ಯಾವಾಗ ಕೃತಕೃತ್ಯ ರಾಗುತ್ತಾರೆ ?

ಶ್ರೀ ಡಿ. ದೇವರಾಜ್ ಅರಸ್.—ಇದು ಒಂದೇ ಕಾಲದಲ್ಲಿ ಒಂದೇ ವರ್ಷದಲ್ಲಿ ಸಾರ್ವ್ ಮಾಡುವ ಪ್ರಾಬ್ಲಂ ಅಲ್ಲ. ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೋಸ್ಕರವೇ ಬೇಕಾದಷ್ಟು ಪ್ಲಾನ್ಸ್ ಮತ್ತು ಪ್ರೋಗ್ರಾಮ್ ಆಗಿವೆ. ಜೊತೆಗೆ ತೀವ್ರ ತೀವ್ರವಾಗಿ ಜನಸಂಖ್ಯೆ ಹೆಚ್ಚುತ್ತಿರುವುದು ಈ ನಿರು ದ್ಯೋಗ ಸಮಸ್ಯೆ ಹೆಚ್ಚಲು ಒಂದು ಕಾರಣ. ನಾವೂ ಮಾನ್ಯ ಸದಸ್ಯರೆಲ್ಲರೂ ಸೇರಿ ಈ ವಿಚಾರದ ಕಡೆ ಲಕ್ಷ್ಯವಿಡಬೇಕು. ಸರ್ಕಾರದವರು ಆ ಬಗ್ಗೆ ಸಾಕಷ್ಟು ಪ್ರಯತ್ನಗಳನ್ನು ಈಗಾಗಲೇ ಮಾಡುತ್ತಿ ದ್ದಾರೆ, ಇನ್ನೂ ಮಾಡುವವರಾಗಿದ್ದಾರೆ.

———

Grants sanctioned to Special Institutions in the State.

*Q.—236. Sri T. N. MADAPPA GOWDA (Nagamangala).—

Will the Government be pleased to state :—

the amount of grant given by Government to special institutions in the State, such as Music Institutions and other cultural institutions for the last three years ?

A.—Sri S. R. KANTHI (Minister for Education).—

The amounts of grant sanctioned to special institutions during the last three years, are as here-under :

Year		Rs. P.
1962–63	...	1,54,721-26
1963–64	...	1,63,528-43
1964–65	...	2,73,758-71

ಶ್ರೀ ಟಿ. ಎಕ್. ಮಾದಪ್ಪ ಗೌಡ.—ಈ ಅನುದಾನದಲ್ಲಿ ಸಂಗೀತ ನಾಟಕ ಅಕಾಡೆಮಿಗೆ ಕೊಡ ತಕ್ಕ ಗ್ರಾಂಟು ಸೇರಿದೆಯೋ ?

† ಶ್ರೀ ಎಸ್. ಆರ್. ಕಂಠಿ.—ಕೆಲಮಟ್ಟಿಗೆ ಸೇರಿದೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—1964-65 ನೇ ಸಾಲಿನಲ್ಲಿ ವಿಶೇಷ ಸಂಸ್ಥೆಗಳಿಗೆ ಎರಡು ಲಕ್ಷ ಚಿಲ್ಲರೆ ಅನುದಾನವನ್ನು ಕೊಟ್ಟಿದೆ ಎಂದು ಉತ್ತರದಲ್ಲಿ ಹೇಳಿದೆ. ಅಂದಮೇಲೆ ಯಾವ್ಯಾವ ವಿಶೇಷ ಗೋಷ್ಠಿಗಳಿಗೆ ಎಷ್ಟೆಷ್ಟು ಪೊಬಲಗುಗಳ ಅನುದಾನವನ್ನು ಕೊಟ್ಟಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಅದು ಒಂದು ದೊಡ್ಡ ಪಟ್ಟಿಯಾಗಿದೆ. ಮಾನ್ಯ ಸದಸ್ಯರಿಗೆ ಬೇಕಾ ದರೆ ಅದನ್ನು ಇಲ್ಲಿ ಹಾಜರು ಪಡಿಸುತ್ತೇನೆ. ಸಂಗೀತ, ನೃತ್ಯ, ನಾಟಕ–ಹೀಗೆ ಬೇರೆ ಬೇರೆ ಸಂಸ್ಥೆ ಗಳಿರುವುದರಿಂದ ಆ ಒಂದು ದೊಡ್ಡ ಪಟ್ಟಿಯನ್ನೇ ಮಾನ್ಯ ಸದಸ್ಯರಿಗೆ ಬೇಕಾದರೆ ಕೊಡುತ್ತೇನೆ.

ಶ್ರೀ ಟಿ. ಎಕ್. ಮಾದಪ್ಪ ಗೌಡ.—ನಮ್ಮ ದೇಶದಲ್ಲಿ ಡಿವಿಜ್ ವಾರ್ ಆಗಲೀ ಅಥವಾ ಡಿಸ್ಟ್ರಿಕ್ಟ್ ವೈಜ್ ಆಗಲೀ ಎಲ್ಲೆಲ್ಲಿ ಎಷ್ಟೆಷ್ಟು ಇಂತಹ ಸಂಸ್ಥೆಗಳಿವೆ ಮತ್ತು ಅವುಗಳಿಗೆ ಎಷ್ಟೆಷ್ಟು ಪೊಬಲಗನ್ನು ಅನುದಾನ ರೂಪವಾಗಿ ಕೊಟ್ಟಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ನಾನು ಮೊದಲೇ ಹೇಳಿದ ಹಾಗೆ ಅದು ಒಂದು ದೊಡ್ಡ ಪಟ್ಟಿಯೇ ಇದೆ. ಮಾನ್ಯ ಸದಸ್ಯರ ಸಂತಯ ಆ ಪಟ್ಟಿಯನ್ನು ನೋಡಿದ ಕೂಡಲೆ ಹೋಗುತ್ತದ. ಅದರಲ್ಲಿ ಎಲ್ಲವೂ ಸ್ಪಷ್ಟವಾಗಿವೆ.

———